# ಕರ್ನಾಟಕದಲ್ಲಿ ಮಹಾತ್ಮ ಗಾಂಧೀಜಿಯವರ ಸಾಮಾಜಿಕ ಜಾಗೃತಿ

ಸಂಗಮೇಶ ಕಚ್ಚು[1] & ಎಂ.ಎನ್. ಬೆನ್ನೂರ[2]

[1]ಎಂ.ಎ. ಪಿಜಿ ಡಿಪ್ಲೋಮಾ ಇನ್ ಆರ್ಕವಲ್ ಮೋಡಿ ಸ್ಟಡಿ.

[2]ಮುಖ್ಯಸ್ಥರು, ಇತಿಹಾಸ ವಿಭಾಗ, ಎಸ್.ಟಿ.ಸಿ. ಕಾಲೇಜು, ಬನಹಟ್ಟಿ.

DOI: https://doi.org/10.5281/zenodo.17411701

## ABSTRACT:

ಮಹಾತ್ಮ ಗಾಂಧೀಜಿಯವರು ಕರ್ನಾಟಕದಲ್ಲಿ ಸಾಮಾಜಿಕ ಜಾಗೃತಿಗೆ ಮಹತ್ತರ ಕೊಡುಗೆ ನೀಡಿದರು. ಅವರು ಸಮಾಜದಲ್ಲಿ ಅಸ್ಪೃಶ್ಯತೆ, ಜಾತಿ ಭೇದ, ಅಸಮಾನತೆಗಳಿಗೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಗಾಂಧೀಜಿ ತಮ್ಮ ಪ್ರವಾಸಗಳಲ್ಲಿ ಹಳ್ಳಿಗಳಿಗೆ ಭೇಟಿ ನೀಡಿ ಜನರೊಂದಿಗೆ ನೇರ ಸಂವಾದ ನಡೆಸಿದರು. ಸ್ವಚ್ಛತೆ, ಶ್ರಮದ ಮಹತ್ವ, ಸತ್ಯ ಮತ್ತು ಅಹಿಂಸೆಯ ಮೇಲಿನ ನಂಬಿಕೆಯಿಂದ ಜನರಲ್ಲಿ ಬದಲಾವಣೆ ತರಲು ಶ್ರಮಿಸಿದರು. ಹೆಣ್ಣುಮಕ್ಕಳ ಶಿಕ್ಷಣ, ಶ್ರಮಿಕರ ಹಕ್ಕುಗಳು, ಗ್ರಾಮೀಣ ಅಭಿವೃದ್ಧಿ ಇವರ ಗಮನದ ಕೇಂದ್ರವಾಗಿದ್ದವು. ಅವರ ಉಪದೇಶಗಳು ಮತ್ತು ನಡೆನುಡಿಗಳು ಕರ್ನಾಟಕದ ಸಾಮಾಜಿಕ ಚಿಂತನೆಗೆ ಪ್ರಭಾವ ಬೀರಿದವು.

ಈ ಮೂಲಕ ಅವರು ಹೃದಯದಿಂದ ಸಮಾಜ ಸುಧಾರಕನಾಗಿ ಬೆಳೆದರು. ಅಲ್ಲದೆ ಗಾಂಧೀಜಿ ಅವರು ಕರ್ನಾಟಕದೊಂದಿಗೆ ಹೊಂದಿರುವ ಸಂಪರ್ಕ ಹಾಗೂ ಅಸ್ಪೃಶ್ಯತೆ ನಿವಾರಣೆ, ಮಹಿಳೆಯರ ಸಬಲೀಕರಣ, ಅಸಹಕಾರ ಚಳುವಳಿ, ಖಾದಿ ಗ್ರಾಮೋದ್ಯೋಗ, ಸತ್ಯಾಗ್ರಹದ ಕುರಿತಾಗಿ ವಿದ್ಯಾರ್ಥಿಗಳಿಗೆ ನೀಡಿದ ಸಂದೇಶಗಳು, ಈ ವಿಚಾರಧಾರೆಗಳ ಕುರಿತಾಗಿ ತಿಳಿದುಕೊಳ್ಳಬಹುದು.

## KEYWORDS:

ಅಸ್ಪೃಶ್ಯತೆ, ಕ್ವಿಟ್ ಇಂಡಿಯಾ, ಚರಕ, ಹುದಲಿ, ಸ್ವದೇಶಿ.

**ಪೀಠಿಕೆ:**

ಮಹಾತ್ಮ ಗಾಂಧೀಜಿಯವರು ಕರ್ನಾಟಕದಲ್ಲಿ ಸಾಮಾಜಿಕ ಜಾಗೃತಿಗೆ ಹೊಸ ದಿಕ್ಕು ನೀಡಿದ ಮಹಾನ್ ನಾಯಕರು. ಅವರ ಅಹಿಂಸೆ, ಸತ್ಯ ಮತ್ತು ಸ್ವಚ್ಛತಾ ಸಿದ್ಧಾಂತಗಳು ಕೇವಲ ಸ್ವಾತಂತ್ರ್ಯ ಹೋರಾಟಕ್ಕೆ ಸೀಮಿತವಾಗದೆ, ಸಮಾಜ ಪರಿವರ್ತನೆಗೂ ಪ್ರೇರಣೆಯಾಗಿವೆ. ಗಾಂಧೀಜಿ ಕರ್ನಾಟಕಕ್ಕೆ ಬರುವ ಸಂದರ್ಭದಲ್ಲಿ ಅಸ್ಪೃಶ್ಯತೆಯ ವಿರುದ್ಧ ಧ್ವನಿ ಎತ್ತಿದರು, ಗ್ರಾಮೀಣ ಭಾಗಗಳಲ್ಲಿ ಸ್ವಚ್ಛತಾ ಚಟುವಟಿಕೆಗಳನ್ನು ಪ್ರಾರಂಭಿಸಿದರು ಮತ್ತು ಸರ್ವೋದಯದ ಮಹತ್ವವನ್ನು ಬೋಧಿಸಿದರು. ವಿಶೇಷವಾಗಿ ಹರಿಜನರಿಗೆ ಸಮಾನತೆ ನೀಡುವ ಪ್ರಯತ್ನ, ಸ್ವದೇಶಿ ವಸ್ತುಗಳ ಪ್ರಚಾರ ಹಾಗೂ ಶ್ರಮದ ಮಹತ್ವ ತಿಳಿಸುವ ಮೂಲಕ ಜನಮನದಲ್ಲಿ ಜಾಗೃತಿ ಮೂಡಿಸಿದರು. ಗಾಂಧೀಜಿಯವರ ಸಂದೇಶಗಳು ಇಂದು ಕೂಡ ಸಮಾನತೆ, ಶಾಂತಿ ಮತ್ತು ಮಾನವೀಯತೆಯ ದೀಪವಾಗಿ ಬೆಳಗುತ್ತಿವೆ.

**ಮಹಾತ್ಮ ಗಾಂಧೀಜಿ ಮತ್ತು ಕರ್ನಾಟಕ ಸಂಬಂಧ:**

ದಕ್ಷಿಣ ಆಫ್ರಿಕೆಯಿಂದ ಭಾರತಕ್ಕೆ ಆಗಮಿಸಿದ ನಂತರ ಮಹಾತ್ಮ ಗಾಂಧೀಜಿಯನ್ನು ಕರ್ನಾಟಕಕ್ಕೆ ಆಹ್ವಾನಿಸಲು ಡಿ.ವಿ. ಗುಂಡಪ್ಪನವರು ಸಾಬರಮತಿಗೆ ತೆರಳಿ, ಇಲ್ಲಿಯ ವಿದ್ಯಾರ್ಥಿಗಳಿಗೆ ರಾಜಕೀಯ ಹಾಗೂ ಸಾಂಸ್ಕೃತಿಕ ಶಿಕ್ಷಣದ ಅರಿವು ಮೂಡಿಸಲು, ಜೊತೆಗೆ

ಸತ್ಯಾಗ್ರಹ ಮತ್ತು ಖಾದಿ-ಗ್ರಾಮೋದ್ಯೋಗದ ಮಹತ್ವವನ್ನು ಬೋಧಿಸಬೇಕೆಂದು ವಿನಂತಿಸಿದರು. ಗಾಂಧೀಜಿಯವರು ಕರ್ನಾಟಕದಲ್ಲಿ ತಮ್ಮ ವಿಚಾರಧಾರೆಗಳನ್ನ ತಿಳಿಸುವ ಸಲುವಾಗಿ ಮತ್ತು ಅಸ್ಪೃಶ್ಯತೆ ನಿವಾರಣೆ, ವಿದ್ಯಾರ್ಥಿಗಳಿಗೆ ಸತ್ಯಾಗ್ರಹದ ಅರಿವು, ಮಹಿಳೆಯರ ಸಬಲೀಕರಣ, ಖಾದಿ ಗ್ರಾಮೋದ್ಯೋಗ ಮತ್ತು ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಕುರಿತಾಗಿ ಅಲ್ಲದೆ ಇಲ್ಲಿನ ನಾಯಕರ ಆಹ್ವಾನದ ಮೇರೆಗೆ ಸ್ವಾತಂತ್ರ್ಯ ಚಳುವಳಿಯ ನಂದಾ ದೀಪವನ್ನು ಬೆಳಗಿಸಲು ಮಹಾತ್ಮ ಗಾಂಧೀಜಿ ಅವರು ಕರ್ನಾಟಕಕ್ಕೆ ಕನಿಷ್ಠ 18 ಬಾರಿ ಭೇಟಿ ನೀಡಿದರು. 1915 ರಿಂದ 1936 ರ ಅವಧಿಯಲ್ಲಿ ಗಾಂಧೀಜಿಯವರು ಭೇಟಿ ನೀಡಿದ ಕರ್ನಾಟಕದ ಪ್ರಮುಖ ಸ್ಥಳಗಳು.

1. ಬೆಂಗಳೂರು 1915, 1920, 1934 ಗಾಂಧೀಜಿಯವರು ಭಾರತೀಯ ನಾಡಿಗೆ ಹಿಂದಿರುಗಿದ ನಂತರ ದಕ್ಷಿಣ ಭಾರತ ಪ್ರವಾಸದ ಭಾಗವಾಗಿ ಬೆಂಗಳೂರಿಗೆ ಭೇಟಿ ನೀಡಿದರು. ಮುಂದೆ, ಖಾದಿ ಚಳವಳಿಗೆ ಬೆಂಬಲವಾಗಿ ಹಾಗೂ ಹರಿಜನೋದ್ಧಾರಕ್ಕಾಗಿ ಮತ್ತೊಮ್ಮೆ ಭೇಟಿಯಾದರು.
2. ಮೈಸೂರು 1920 ರ ದಶಕ ಅಸಹಕಾರ ಚಳವಳಿಗೆ ಬೆಂಬಲವಾಗಿ ಮತ್ತು ಪ್ರಜೆಗಳಿಗೆ ರಾಷ್ಟ್ರೀಯ ಚಳವಳಿಯ ಅರಿವು ಮೂಡಿಸಲು ಭೇಟಿ ನೀಡಿದರು.
3. ಬೆಳಗಾವಿ 1924 ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷರಾಗಿದ್ದು, ಗಾಂಧೀಜಿಯವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಏಕೈಕ.
4. ಧರ್ಮಸ್ಥಳ 1934 ಹರಿಜನೋದ್ಧಾರ ಯಾತ್ರೆಯ ಭಾಗವಾಗಿ, ದೇವಾಲಯ ಪ್ರವೇಶಕ್ಕಾಗಿ ಸಮಾನತೆಗೆ ಬೆಂಬಲ ನೀಡಿದರು. ಧರ್ಮಾಧಿಕಾರಿ ಜೊತೆಗೆ ಚರ್ಚೆ ನಡೆಸಿದರು.
5. ಮಂಗಳೂರು 1934 ಅಸ್ಪೃಶ್ಯತೆಯ ವಿರುದ್ಧ ಪ್ರಚಾರ. ಸ್ಥಳೀಯ ಜನರಲ್ಲಿ ಖಾದಿ ಉಪಯೋಗ ಹಾಗೂ ಸಮಾನತೆಯ ಕುರಿತು ಜಾಗೃತಿ.
6. ಉಡುಪಿ 1934 ದೇವಸ್ಥಾನ ಪ್ರವೇಶ ಚಳವಳಿಗೆ ಬೆಂಬಲ.
7. ಶಿವಮೊಗ್ಗ 1934 ಹರಿಜನ ಹಕ್ಕುಗಳ ಬಗ್ಗೆ ಭಾಷಣ.
8. ದಾವಣಗೆರೆ 1934 ಸಮಾಜ ಸುಧಾರಣೆ ಹಾಗೂ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಕಾರ್ಯಕರ್ತರ ಜೊತೆ ಸಭೆ.
9. ಬಳ್ಳಾರಿ 1934 ಅಸ್ಪೃಶ್ಯತೆಯ ನಿರ್ಮೂಲನೆ, ಖಾದಿ ಮಾರಾಟ ಮತ್ತು ಚಂದಾ ಸಂಗ್ರಹ.
10. ಹುಬ್ಬಳ್ಳಿ 1934 ಸ್ವದೇಶಿ ಹಾಗೂ ಸಮಾನತೆಗೆ ಸಂಬಂಧಿಸಿದ ಸಂದೇಶ.
11. ಚಿಕ್ಕಮಗಳೂರು 1934 ಅಸ್ಪೃಶ್ಯತೆಗೆ ವಿರೋಧವಾಗಿ ಹರಿಜನ ಯಾತ್ರೆಯ ಭಾಗವಾಗಿ.

**ಕರ್ನಾಟಕದ ವಿದ್ಯಾರ್ಥಿಗಳಿಗೆ ಸತ್ಯಾಗ್ರಹದ ಅರಿವು:**

ಮಹಾತ್ಮ ಗಾಂಧೀಜಿ ಅವರು ಕರ್ನಾಟಕಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ತಮ್ಮ ವಿಚಾರಧಾರೆಗಳನ್ನು ಹಾಗೂ ಭಾರತದ ಸ್ವಾತಂತ್ರ್ಯ ಹೋರಾಟದ ಜ್ವಾಲೆಯನ್ನು ಪಸರಿಸುವ ಸಲುವಾಗಿ ವಿದ್ಯಾರ್ಥಿಗಳಿಗೆ ಸತ್ಯಾಗ್ರಹದ ಕುರಿತಾದ ಅರಿವನ್ನು ಮೂಡಿಸಿದರು.

**1. ನಂದಿ ಹಿಲ್ಸ್1927:**

ಗಾಂಧೀಜಿ 1927 ರಲ್ಲಿ ನಂದಿ ಹಿಲ್ಸ್‌ಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಅವರು ಸ್ಥಳೀಯ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದರು. ಅವರು ಅಹಿಂಸೆಯ

ಮಾರ್ಗವನ್ನು ಅನುಸರಿಸಿ, ಇಂಗ್ಲಿಷ್ ಆಡಳಿತದ ವಿರುದ್ಧ ಶಾಂತಿಯುತವಾಗಿ ಹೋರಾಡಬೇಕೆಂದು ಸಲಹೆ ನೀಡಿದರು.

**2. ಬೆಂಗಳೂರು – 1927, 1934, 1936**

ಬೆಂಗಳೂರು ನಗರಕ್ಕೆ ಗಾಂಧೀಜಿ ಹಲವು ಬಾರಿ ಬಂದರು. ಅವರು ಮಿಶನ್ ಶಾಲೆಗಳಲ್ಲಿ ಹಾಗೂ ಕಾಲೇಜುಗಳಲ್ಲಿ ಭಾಷಣ ಮಾಡಿದರು. ವಿದ್ಯಾರ್ಥಿಗಳೊಂದಿಗೆ ಮಾತನಾಡುವಾಗ ಅವರು ಸತ್ಯಾಗ್ರಹದ ತತ್ವ, ಶಿಷ್ಟಾಚಾರ ಮತ್ತು ಶ್ರಮದ ಮಹತ್ವದ ಬಗ್ಗೆ ತಿಳಿಸಿದರು. 1934 ರಲ್ಲಿ ಅವರು ಬಸ್‌ನಲ್ಲಿ ರಸ್ತೆ ಮಾರ್ಗವಾಗಿ ಗ್ರಾಮೀಣ ಪ್ರದೇಶಗಳಿಗೆ ಹೋಗುತ್ತಾ ಸತ್ಯಾಗ್ರಹದ ಸಂದೇಶ ಹರಡಿದರು.

**3. ಮೈಸೂರು–1927:**

ಗಾಂಧೀಜಿ ಮೈಸೂರು ಸಂಸ್ಥಾನಕ್ಕೆ 1927 ರಲ್ಲಿ ಭೇಟಿ ನೀಡಿದರು. ಆ ಸಮಯದಲ್ಲಿ ಮೈಸೂರು ಮಹಾರಾಜ ಅವರ ಆಹ್ವಾನಕ್ಕೆ ಒಪ್ಪಿಕೊಂಡು ಬಂದ ಅವರು, ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಮುಂದೆ ಮಾತನಾಡಿದರು. ಅಹಿಂಸೆ, ಸತ್ಯ ಮತ್ತು ಸ್ವದೇಶಿ ವಸ್ತುಗಳ ಬಳಕೆಯ ಕುರಿತು ಸ್ಪಷ್ಟವಾಗಿ ವಿವರಣೆ ನೀಡಿದರು. ವಿದ್ಯಾರ್ಥಿಗಳಿಗೆ ಅವರು ದೇಶ ಸೇವೆಯ ಪ್ರಾಮುಖ್ಯತೆಯ ಬಗ್ಗೆ ಜೋರಾಗಿ ಹೇಳಿದರು.

4. ಧಾರವಾಡ 1937 ಗಾಂಧೀಜಿ ಧಾರವಾಡದ ಕರ್ನಾಟಕ ಕಾಲೇಜಿಗೆ ಭೇಟಿ ನೀಡಿದರು. ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡುತ್ತಾ, ಅವರು ಸತ್ಯಾಗ್ರಹದ ತತ್ವದ ಬಗ್ಗೆ ವಿವರವಾಗಿ ವಿವರಿಸಿದರು. ಈ ಭಾಷಣ ವಿದ್ಯಾರ್ಥಿಗಳಲ್ಲಿ ದೇಶಭಕ್ತಿಯ ಜ್ವಾಲೆ ಉರಿಯುವಂತೆ ಮಾಡಿತು.

**5. ಉತ್ತರ ಕರ್ನಾಟಕದ ಭಾಗಗಳಿಗೆ ಭೇಟಿ –1934**

ಗಾಂಧೀಜಿ 1934 ರ ಹರಿಜನ ಚಳವಳಿ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಭಾಗಗಳಿಗೆ ಭೇಟಿ ನೀಡಿದರು. ಮುಖ್ಯವಾಗಿ ಗದಗ, ಜಕ್ಕಲಿ, ಮತ್ತು ಅಮ್ಮಿನಭಾವಿ, ಇನಾಮಹೊಂಗಲ್, ಮಂಗಸೂಳಿ, ಅಥಣಿ, ಬಿಜಾಪುರ, ತೊರವಿ, ಬನಹಟ್ಟಿ, ತಿಕೋಟ, ಹೊನವಾಡ, ಇಳಕಲ್ ಇನ್ನೂ ಮುಂತಾದ ಹಳ್ಳಿಗಳಿಗೆ ಭೇಟಿ ನೀಡಿದರು.

**ಅಸ್ಪೃಶ್ಯತಾ ನಿವಾರಣೆಗೆ ಕರೆ:**

ಮಹಾತ್ಮ ಗಾಂಧೀಜಿ ಅವರು ಅಸ್ಪೃಶ್ಯತೆಯ ವಿರುದ್ಧ ಗಟ್ಟಿಯಾದ ನಿಲುವು ತೆಗೆದುಕೊಂಡವರು. ಅವರು ದೇಶದಾದ್ಯಂತ, ಅದರಲ್ಲೂ ಮುಖ್ಯವಾಗಿ ದಕ್ಷಿಣ ಭಾರತದ ಅಸ್ಪೃಶ್ಯತಾ ನಿವಾರಣೆಗೆ ವಿಶೇಷ ಗಮನ ಹರಿಸಿದರು. ಕರ್ನಾಟಕ (ಅಂದಿನ ಮೈಸೂರು ಸಂಸ್ಥಾನ) ಪ್ರದೇಶಕ್ಕೆ ಅವರು ಹಲವು ಬಾರಿ ಭೇಟಿಯಾಗಿದ್ದು, ಅಸ್ಪೃಶ್ಯತೆ ವಿರುದ್ಧ ಜನಜಾಗೃತಿ ಮೂಡಿಸಿದರು.

1. ಮೈಸೂರು 1927: ಮಹಾರಾಜಾ ಕೃಷ್ಣರಾಜ ಒಡೆಯರ್ ಅವರ ಆಹ್ವಾನಕ್ಕೆ ಪ್ರತಿಯಾಗಿ, ಗಾಂಧೀಜಿ 1927ರಲ್ಲಿ ಮೈಸೂರಿಗೆ ಆಗಮಿಸಿದರು. ಅಸ್ಪೃಶ್ಯರನ್ನು ದೇವಾಲಯಗಳಿಗೆ ಪ್ರವೇಶ ಮಾಡಿಸುವುದು, ಶಿಕ್ಷಣ ದೊರಕಿಸುವುದು ಮತ್ತು ಸಾಮಾಜಿಕ ಸಮಾನತೆ ನೀಡುವುದು ಅವಶ್ಯಕ ಎಂದು ಪ್ರತಿಪಾದಿಸಿದರು. ಗಾಂಧೀಜಿಯ ಆಪ್ತ ಸಹಚರರಾದ ತ್ಯಾಗರಾಜನ್ ಅವರು, ಈ ಸಂದರ್ಭದಲ್ಲಿ ಅಸ್ಪೃಶ್ಯರ ಬಗ್ಗೆ ವಿಶೇಷ ಕಾರ್ಯ ನಡೆಸಿದರು. ಮೈಸೂರಿನಲ್ಲಿರುವ ಚಿಕ್ಕ ವಲೆಯರ ಬೀದಿಗೆ ಅಶೋಕಪುರ ಎಂಬ

ಹೆಸರನ್ನು ಇಟ್ಟರು. ಅಲ್ಲದೆ ನಂದಿ ಬೆಟ್ಟದಲ್ಲಿ ಬಹುದಿನಗಳಿಂದ ಇದ್ದು ಅಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಅಲ್ಲಿರುವ ಜನತೆಗೆ ಶಿಕ್ಷಣವನ್ನು ನೀಡಲು ಕರೆ ನೀಡಿದರು.

2. ಉಡುಪಿ – 1934 ಪೇಜಾವರ ಮಠದ ಕಾರ್ಯಕ್ರಮ: ಗಾಂಧೀಜಿ ಉಡುಪಿ ಜಿಲ್ಲಾ ಪೇಜಾವರ ಮಠಕ್ಕೆ ಭೇಟಿ ನೀಡಿ ಅಸ್ಪೃಶ್ಯರ ಸಹಭಾಗಿತ್ವದ ಮಹತ್ವದ ಬಗ್ಗೆ ಮಾತನಾಡಿದರು. ಅವರು ಹೇಳಿದ ಮುಖ್ಯ ಸಂದೇಶ: "ಅಸ್ಪೃಶ್ಯತೆ ಮಾನವತೆಯ ವಿರುದ್ಧವಾದ ಕ್ರೂರತೆಯಾಗಿದೆ."
3. ಬೆಳಗಾವಿ – 1924 ಕಾಂಗ್ರೆಸ್ ಅಧಿವೇಶನ ಅಸ್ಪೃಶ್ಯರಿಗಾಗಿಯೇ "ಹರಿಜನ ಸೇವಾ ಸಂಘ" ಸ್ಥಾಪನೆಗಾಗಿ ಪ್ರೇರಣೆಯಾದ ಅವಧಿಯಿದು.
4. ಧಾರವಾಡ – 1937 ಅಸ್ಪೃಶ್ಯರ ಶಾಲೆ ಭೇಟಿ: ಗಾಂಧೀಜಿ ಧಾರವಾಡದಲ್ಲಿ ಅಸ್ಪೃಶ್ಯ ಮಕ್ಕಳಿಗೆ ಸ್ಥಾಪಿತ ಶಾಲೆಯೊಂದನ್ನು ಭೇಟಿ ನೀಡಿ, ಶಿಕ್ಷಣವೇ ಸಮಾನತೆಯ ದಾರಿ ಎಂದು ಹೇಳಿದರು.

**5. ಗಾಂಧೀಜಿಯವರು ಮೋಟೆಬೆನ್ನೂರಿಗೆ ಭೇಟಿ:**

ಗಾಂಧೀಜಿಯವರು ಮೋಟೆಬೆನ್ನೂರಿಗೆ ಭೇಟಿ ನೀಡಿ ಅಲ್ಲಿ ಸರದಾರ ವೀರನಗೌಡ ಪತ್ನಿ ನಾಗಮ್ಮ ಪಾಟೀಲ್ ಅವರ ಮನೆಗೆ ಹೋಗಿ ದಲಿತ ಹೆಣ್ಣು ಮಕ್ಕಳನ್ನು ನಿಮ್ಮ ಮನೆಯ ಹೆಣ್ಣು ಮಕ್ಕಳೊಂದಿಗೆ ಬೆಳೆಸಬೇಕೆಂದು ಸಲಹೆ ನೀಡಿದರು. ಇದರಿಂದ ಆಗ ಅವರು ಜೀವನವಿಡಿ ಗಾಂಧೀಜಿಯವರು ಹೇಳಿದಂತೆ ಮಾಡಿದರು. ನಂತರದಲ್ಲಿ ಹುಬ್ಬಳ್ಳಿಯಲ್ಲಿ ಹರಿಜನ ಬಾಲಿಕಾಶ್ರಮವನ್ನು ಸ್ಥಾಪಿಸಿದರು. ಮುಂದೆ ಅದೇ ಮಹಿಳಾ ವಿದ್ಯಾಪೀಠ ಆಯಿತು.

**6. ಗಾಂಧೀಜಿಯವರು ಕಾರವಾರದಿಂದ ಹಾವೇರಿಗೆ ಭೇಟಿ.**

ಗಾಂಧೀಜಿಯವರು ಕಾರವಾರದಿಂದ ಹಾವೇರಿಗೆ ಬಂದಾಗ ಭವ್ಯ ಸ್ವಾಗತವನ್ನು ಮಾಡಿದರು. 1924ರಲ್ಲಿ ಹಾವೇರಿಯಲ್ಲಿ ಹರಿಜನರ ಕಲ್ಯಾಣಕ್ಕಾಗಿ ಸಾರ್ವಜನಿಕ ದೇಣಿಗೆ ಸಂಗ್ರಹವನ್ನು ಮಾಡಿದರು. ಸಾಯಂಕಾಲ ಹಾವೇರಿಯಲ್ಲಿ ಅಪಾರ ಜನಸ್ತೋಮದ ಎದುರಿಗೆ ಮಹಾತ್ಮ ಗಾಂಧೀಜಿ ಅವರು ಹಿಂದಿ ಭಾಷಣವನ್ನು ಮಾಡಿದರು, ಅದನ್ನು ಹರಡೇಕರ್ ಮಂಜಪ್ಪನವರು ಕನ್ನಡಕ್ಕೆ ಅನುವಾದ ಮಾಡಿದ್ದರು, ಹರಿಜನರ ಕಲ್ಯಾಣಕ್ಕಾಗಿ ಜನರು ವಿಶೇಷ ಮಹಿಳೆಯರ ದಾನ ಆಭರಣಗಳನ್ನು ಗಾಂಧೀಜಿ ಪ್ರಭಾವಕ್ಕಾಗಿ ದೇಣಿಗೆಯನ್ನು ನೀಡಿದ್ದರು. ಹಾವೇರಿ ಜಿಲ್ಲಾ ದಾಖಲೆ ಪ್ರಕಾರ ಗಾಂಧೀಜಿಯವರು ಹಾವೇರಿಯಲ್ಲಿ ಹರಿಜನ ಶಾಲೆ ಮತ್ತು ಧರ್ಮ ಶಾಲೆಗೆ ಅಡಿಪಾಯ ಹಾಕಿದ್ದರು ಎಂಬುವುದು ತಿಳಿದು ಬರುತ್ತದೆ.

**ಗಾಂಧೀಜಿಯ ಚಟುವಟಿಕೆಗಳು ಅಸ್ಪೃಶ್ಯತೆ ನಿವಾರಣೆಗೆ:**

1933ರಲ್ಲಿ ಅವರು ಹರಿಜನ ಯಾತ್ರೆ ಪ್ರಾರಂಭಿಸಿದರು. ಈ ಸಂದರ್ಭದಲ್ಲೂ ಅವರು ಮತ್ತೆ ದಕ್ಷಿಣ ಭಾರತದಲ್ಲಿ ಅಸ್ಪೃಶ್ಯರ ಕುರಿತಾಗಿ ಜನತೆಗೆ ಸಂದೇಶ ನೀಡಿದರು. ಗಾಂಧೀಜಿಯವರ ಹರಿಜನ ಸೇವಾ ಚಳುವಳಿಯ ಪರಿಣಾಮವಾಗಿ ಕರ್ನಾಟಕದ ಎಲ್ಲಾ ಜಿಲ್ಲಾ ಕೇಂದ್ರಗಳು ಹಾಗೂ ಕೆಲವು ಪ್ರಮುಖ ಪಟ್ಟಣಗಳಲ್ಲಿ ಹರಿಜನ ಸೇವಕ ಶಾಖೆಗಳು ಸ್ಥಾಪಿಸಲ್ಪಟ್ಟವು. ಗಾಂಧೀಜಿಯವರ ಹರಿಜನ ಪ್ರಸಾರದ ವೇಳೆ ಜನರಲ್ಲಿ ಅಪಾರ ಉತ್ಸಾಹ ವ್ಯಕ್ತವಾಯಿತು. ಈ ಚಳುವಳಿಯಲ್ಲಿ ವೀರನಗೌಡ ಪಾಟೀಲರು ಮತ್ತು ಅವರ ಪತ್ನಿ ಮಹತ್ವದ ಪಾತ್ರವಹಿಸಿದರು. ಹರಿಜನೋದ್ಧಾರ ಮುಂಚೂಣಿಯವರಾಗಿ ಪರಿಗಣಿತರಾದರು. 1934 ರಲ್ಲಿ

ಗಾಂಧೀಜಿಯವರು ತಮ್ಮ ಪ್ರವಾಸದ ಸಂದರ್ಭದಲ್ಲಿ ಹುಬ್ಬಳ್ಳಿಯಲ್ಲಿ ಹರಿಜನ ಬಾಲಿಕಾಶ್ರಮವನ್ನು ಸ್ಥಾಪಿಸಿದರು. ಇದು ಆ ಕಾಲದ ಪ್ರಮುಖ ಸಾಮಾಜಿಕ ಸೇವಾ ಸಂಸ್ಥೆಗಳಲ್ಲೊಂದು. ಗಾಂಧೀಜಿಯವರ ರಚನಾತ್ಮಕ ಕಾರ್ಯಗಳು ರಾಷ್ಟ್ರೀಯವಾದಿಗಳಿಗೆ ತಿಳಿದಿದ್ದರೂ ಕರ್ನಾಟಕದಲ್ಲಿ ಅನೇಕರಿಂದ ಪ್ರಾಯೋಗಿಕ ಬೆಂಬಲ ದೊರೆಯಲಿಲ್ಲ ಎಂಬುದು ನಿಜ. ಈ ವಿಚಾರದ ಕುರಿತು ಹರಡಿಕರ್ ಮಂಜಪ್ಪನವರು ಆದಿ ಜನರ ಸುಧಾರಣೆ ಎಂಬ ಕೃತಿಯನ್ನು ಮತ್ತು ಕೆ ಎಫ್ ಪಾಟೀಲರು ಅಸ್ಪೃಶ್ಯತಾ ನಿವಾರಣೆ ಎಂಬ ಗ್ರಂಥವನ್ನು ರಚಿಸಿ ಸಮಾಜದಲ್ಲಿ ಜಾಗೃತಿ ಮೂಡಿಸಿದರು. ಇದು ಗಾಂಧೀಜಿ ಅವರ ಪ್ರೇರಣೆಯಿಂದ ಕರ್ನಾಟಕದ ಸಾಮಾಜಿಕ ಪುನರುಜ್ಜೀವನಕ್ಕೆ ದಾರಿಯಾಗಿ ಒಂದು ಉಜ್ವಲ ಅಧ್ಯಾಯವಾಗಿ ಹೊರಹೊಮ್ಮಿತು.

**ಅಸಹಕಾರ ಚಳುವಳಿಯೊಂದಿಗೆ ಸಾಮಾಜಿಕ ಜಾಗೃತಿ:**

ಮಹಾತ್ಮ ಗಾಂಧೀಜಿಯವರ ಸತ್ಯ, ಅಹಿಂಸೆಯ ತತ್ವಗಳು ಭಾರತದ ಸ್ವಾತಂತ್ರ್ಯ ಹೋರಾಟವನ್ನು ಹೊಸ ಮಾರ್ಗದತ್ತ ಕೊಂಡೊಯ್ದವು. ಈ ತತ್ತ್ವಗಳನ್ನು ಕೇವಲ ಉಪದೇಶಗಳಾಗಿ ಇಡುವ ಬದಲು, ಅವರು ದೇಶದ ಜನತೆಗೆ ಜೀವನ್ಮೂಲ್ಯಗಳಾಗಿ ಬೋಧಿಸಿದರು. ಈ ಕ್ರಾಂತಿಕಾರಿ ಚಳುವಳಿಯ ಒಂದು ಶಕ್ತಿಶಾಲಿ ಅಂಗವಾಗಿ 1920ರಲ್ಲಿ ಅಸಹಕಾರ ಚಳುವಳಿ ಆರಂಭವಾಯಿತು. 1920ರ ನವೆಂಬರ್ 7ರಂದು, ಗಾಂಧೀಜಿಯವರು ಕರ್ನಾಟಕದ ಬೆಳಗಾವಿ ಜಿಲ್ಲೆಯ ನಿಪ್ಪಾಣಿಗೆ ಭೇಟಿ ನೀಡಿದರು. ಇಲ್ಲಿ ಅವರು ಜನರಲ್ಲಿ ಅಸಹಕಾರ ಚಳುವಳಿಯೊಂದಿಗೆ ಸಾಮಾಜಿಕ ಜಾಗೃತಿ ಮೂಡಿಸಿದರು. ಈ ದೀಪ ಬೆಳಗಿದ ಬೆನ್ನಲ್ಲೇ, ನವೆಂಬರ್ 10 ಮತ್ತು 11ರಂದು ಧಾರವಾಡ ಹಾಗೂ ಹುಬ್ಬಳ್ಳಿಗೆ ಭೇಟಿ ನೀಡಿದ ಗಾಂಧೀಜಿಯವರು, ಸಿದ್ಧಾರೂಢ ಮಠದಲ್ಲಿ ವಾಸ್ತವ್ಯ ಹೂಡಿ, ಆ ಚಳುವಳಿಯ ಮಹತ್ವವನ್ನು ಮನವರಿಕೆ ಮಾಡಿಸಿದರು. ಗಾಂಧೀಜಿಯ ಸಾದುತನ ಹಾಗೂ ತಪಸ್ಸಿನಂತೆ ತೊಡಗಿಸಿಕೊಂಡ ರಾಜಕೀಯ ತಜ್ಞರು, ಕನ್ನಡನಾಡಿನ ಪತ್ರಿಕಾರಂಗದಲ್ಲಿ ರಾಷ್ಟ್ರಪರ ಆಂದೋಲನಕ್ಕೆ ಬಿರುಸು ನೀಡಿದರು. ಈ ಚಳುವಳಿಯ ಪ್ರಭಾವದಿಂದ, ಪೂರ್ವಕಾಲದ ರಾಜಕೀಯ ಕಾರ್ಯಕರ್ತರು ದೇಶ ಸೇವೆಗೆ ಸಮರ್ಪಿತರಾದರು. ಸತ್ಯಾಗ್ರಹದ ತಂತ್ರವನ್ನು ಕಲಿಯಲು ಕಾಕಾ ಕಾರ್ನಿಸ್, ಟಿ.ಎಸ್. ನಾಯಕ್, ಗಂಗಾಧರ್ ರಾವ್ ದೇಶಪಾಂಡೆ, ಹರಡಿಕರ್ ಮಂಜಪ್ಪ ಮುಂತಾದವರು ಸಬರಮತಿ ಆಶ್ರಮಕ್ಕೆ ತೀರ್ಥಯಾತ್ರೆಗೆ ಹೊರಟರು. ಅಸಹಕಾರ ಚಳುವಳಿಯು ಯುವ ಮನಸ್ಸುಗಳನ್ನು ತೀವ್ರವಾಗಿ ಪ್ರಭಾವಿತಗೊಳಿಸಿತು. ಸಾವಿರಾರು ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳನ್ನು ತ್ಯಜಿಸಿ, ಆಗ ಆರಂಭಗೊಂಡಿದ್ದ ರಾಷ್ಟ್ರೀಯ ಶಾಲೆಗಳಲ್ಲಿ ಸೇರಿದರು. ಸುಮಾರು 48 ರಾಷ್ಟ್ರೀಯ ಶಾಲೆಗಳು ಕರ್ನಾಟಕದಲ್ಲಿ ಸ್ಥಾಪನೆಯಾದವು.

**ಮಹಿಳೆಯರ ಸಬಲೀಕರಣ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾತ್ರ:**

ಗಾಂಧೀಜಿ ಮಹಿಳಾ ಸಬಲೀಕರಣಕ್ಕೆ ಪ್ರತ್ಯೇಕ ಸ್ಥಾನಮಾನ ನೀಡಿದರು. ಗಾಂಧೀಜಿಯವರು ರೂಪಿಸಿದ ಚರಕ ಚಳುವಳಿ, ಕೇವಲ ವಸ್ತ್ರೋತ್ಪಾದನೆಯ ಚಳುವಳಿಯಾಗಿರದೆ, ಮಹಿಳೆಯರ ಆರ್ಥಿಕ ಸ್ವಾವಲಂಬನೆಯ ಸಾಧನವಾಗಿತ್ತು. ಸ್ವಾತಂತ್ರ್ಯ ಹೋರಾಟದ ಸಂದರ್ಭಗಳಲ್ಲಿ ಮಹಿಳೆಯರು ಅಪೂರ್ವ ಧೈರ್ಯವನ್ನು ತೋರಿಸಿದರು. ಗಾಂಧೀಜಿಯವರ ಕರೆಗೆ ಓಗೊಟ್ಟು, ಹಲವು ಮಹಿಳೆಯರು ಹೋರಾಟಗಳಿಗೆ ಧುಮುಕಿದರು. ದೇಶ ಸೇವಾ, ಪಿಕೇಟಿಂಗ್, ಅರಣ್ಯ ಸತ್ಯಾಗ್ರಹ, ಧ್ವಜ ಹಾರಿಸುವಂತಹ ಕ್ರಿಯಾಕಲಾಪಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಈ ಭಾಗದಲ್ಲಿ ಮೈಸೂರಿನ ಮಹಿಳೆಯರು ಮುಂಚೂಣಿಯಲ್ಲಿ ಇದ್ದರು. ಬಳ್ಳಾರಿ ಸಿದ್ದಮ್ಮ, ಸುಬ್ಬಮ್ಮ ಜೋಯಿಸ್, ಸುನಂದಮ್ಮ, ಯಶೋಧರಮ್ಮ ದಾಸಪ್ಪ,

ನಾಗರತ್ನಮ್ಮ ಹಿರೇಮಠ್, ಪದ್ಮಾವತಿ ಬಿದರಿ, ಜಯದೇವಿತಾಯಿ ಲಿಗಾಡೆ, ಶಕುಂತಲಾ ಕರ್ತ್ರ್ಯ ಕೋಟಿ, ಸಿದ್ದಮತಿ ಮೈಲಾರ, ಲಕ್ಷ್ಮಮ್ಮ, ಮುದ್ದಮ್ಮ ಸೇರಿದಂತೆ ಅನೇಕರು ರಾಜ್ಯದ ರಾಜಕೀಯ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು, ಮಹಿಳಾ ಶಕ್ತಿಯ ನಿಜವಾದ ರೂಪವನ್ನು ತೋರಿಸಿದರು. ಇವರ ಬೆನ್ನು ಹಿಡಿದವರು ದುರ್ಗಮ್ಮ, ಭಾಗಿರಥಮ್ಮ, ಗೌರಮ್ಮ, ಕಾವೇರಮ್ಮ, ಉಮಾಬಾಯಿ ಕುಂದಾಪುರ ಮುಂತಾದವರು. ಮಹಿಳೆಯರ ಈ ಧೈರ್ಯ ಹಾಗೂ ಶಕ್ತಿ ಚಳುವಳಿಗಳನ್ನು ಉನ್ನತ ಮಟ್ಟಕ್ಕೆ ಎಳೆದಿತು. ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯ ಈಚಲದಲ್ಲಿ ನಡೆದ ಸತ್ಯಾಗ್ರಹ, ಮೈಸೂರಿನ ಹೆಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ, ಹಾಗೂ ತಿಗಣಿ ಸತ್ಯಾಗ್ರಹಗಳು ಇದಕ್ಕೆ ಸಾಕ್ಷಿಗಳಾಗಿವೆ. ಈ ಹೋರಾಟಗಳಲ್ಲಿ ಮಹಿಳೆಯರು ತಮ್ಮ ಪ್ರಜ್ಞೆ, ಧೈರ್ಯ ಮತ್ತು ನೇತೃತ್ವವನ್ನು ತೋರಿಸಿ, ಇತಿಹಾಸದಲ್ಲಿ ಅಮರರಾದರು.

1939ರಲ್ಲಿ ನಡೆದ ತುರುವನೂರು ಸತ್ಯಾಗ್ರಹ, ಬಳ್ಳಾರಿ ಸಿದ್ದಮ್ಮ ಮತ್ತು ನಾಗರತ್ನಮ್ಮ ಹಿರೇಮಠ್ ಅವರ ನೇತೃತ್ವದಲ್ಲಿ ನಡೆದ ಅರಣ್ಯ ಹೋರಾಟಗಳು, ಮಹಿಳೆಯರ ಸಂಘಟಿತ ಶಕ್ತಿಯ ಪ್ರದರ್ಶನವಾಗಿದ್ದವು. ಇದಲ್ಲದೆ, 1942ರ "ಕ್ವಿಟ್ ಇಂಡಿಯಾ" ಚಳುವಳಿಯಲ್ಲೂ ಮಹಿಳೆಯರ ಪಾತ್ರ ವಿಶಿಷ್ಟವಾಗಿತ್ತು. ಅವರು ಕೇವಲ ಪಾಲ್ಗೊಂಡವರಲ್ಲ, ಪರಿವರ್ತನೆಯ ನಾಯಕರಾಗಿ ಇತಿಹಾಸ ಬರೆದವರು. ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಕೊಡುಗೆ, ರಾಜಕೀಯದಿಂದ ಸಾಮಾಜಿಕ ಕ್ಷೇತ್ರವರೆಗೆ ವ್ಯಾಪಿಸಿದ್ದು, ಇಂದು ಮಹಿಳಾ ಸಬಲೀಕರಣದ ಬಂಡವಾಳವಾಗಿದೆ. ಈ ನಾಯಕತ್ವ, ಬುದ್ಧಿಮತ್ತೆ ಮತ್ತು ಬದ್ಧತೆ ನವಭಾರತದ ನಿರ್ಮಾಣದಲ್ಲಿ ಮಾದರಿಯಾಗಿದೆ. ಮಹಾತ್ಮ ಗಾಂಧೀಜಿಯವರ ಸನ್ನಿವೇಶದಲ್ಲಿ ಮಹಿಳೆಯರಿಗೆ ದೊರೆತ ಸ್ಫೂರ್ತಿ, ಅವರನ್ನು ಕೇವಲ ಮನೆಯೊಳಗಿನವಳಾಗಿ ಮಾತ್ರವಲ್ಲದೆ, ರಾಷ್ಟ್ರ ನಿರ್ಮಾಣದ ಆಧಾರಸ್ತಂಭವನ್ನಾಗಿ ಮಾಡಿತು. ಈ ಸಂದರ್ಭದಲ್ಲಿ ಭಾರತೀಯ ಮಹಿಳೆಯರು ತಾವು ಮೌನವಾಗಿರುವುದಕ್ಕಿಂತ, ಧೈರ್ಯದಿಂದ ಹೋರಾಡುವುದು ಹೆಚ್ಚು ಶ್ರೇಷ್ಠ ಎಂಬುದನ್ನು ಸ್ಪಷ್ಟವಾಗಿ ತೋರಿಸಿದರು. ಇವರ ಪವಿತ್ರ ತ್ಯಾಗ, ಶ್ರದ್ಧೆ, ಶಕ್ತಿ ಇಂದಿಗೂ ಪ್ರೇರಣೆಯಾಗಿದೆ. ಇವು ನಮ್ಮ ನಾಡಿನ ಸಾಂಸ್ಕೃತಿಕ, ರಾಜಕೀಯ ಹಾಗೂ ಸಾಮಾಜಿಕ ಚರಿತ್ರೆಯಲ್ಲಿ ಅಳಿಯದ ಗುರುತುಗಳನ್ನು ಬರೆದಿವೆ.

**ಕರ್ನಾಟಕದಲ್ಲಿ ಖಾದಿ ಗ್ರಾಮೋದ್ಯೋಗದ ಕುರಿತಾಗಿ ಗಾಂಧೀಜಿಯವರ ವಿಚಾರಗಳು:**

1924ರಲ್ಲಿ ಮಹಾತ್ಮ ಗಾಂಧೀಜಿಯವರು ಸ್ವತಂತ್ರ ಹೋರಾಟಗಾರರಾದ ಮೈಲಾರ್ ಮಾದೇವಪ್ಪನವರನ್ನು ಭೇಟಿ ಮಾಡಲು ಮೋಟೆಬೆನ್ನೂರಿಗೆ ತೆರಳಿದರು. ಮೋಟೆಬೆನ್ನೂರಿನ ಕೋಟೆ ಬಯಲಿನಲ್ಲಿ ಖಾದಿ ಧರಿಸಿ ಸ್ವತಂತ್ರ ಚಳುವಳಿಗೆ ಧುಮುಕಲು ಪ್ರೇರೇಪಣೆ ನೀಡಿದರು. ಅಂದು ಸಾಯಂಕಾಲ ವೇಳೆಯಲ್ಲಿ ಹಾವೇರಿಯ ಮುರುಘ ಮಠದಲ್ಲಿ ತಂಗಿದರು. ಮರುದಿನ ಬ್ಯಾಡಗಿಗೆ ತಮ್ಮ ಪ್ರಯಾಣವನ್ನು ಬೆಳೆಸಿದರು. ಬ್ಯಾಡಗಿಯಲ್ಲಿ ಖಾದಿ ಧರಿಸಿರುವಂತೆ ಪ್ರತಿಜ್ಞೆ ಮಾಡಿ ಸ್ವದೇಶಿ ಚಳುವಳಿಗೆ ಧುಮುಕಲು ಪ್ರೇರಣೆಯನ್ನು ನೀಡಿದರು. ನಂತರದಲ್ಲಿ ರಾಣೇಬೆನ್ನೂರಿನ ರೈಲ್ವೆ ನಿಲ್ದಾಣದ ಬಳಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು. ಬದನಾವಲು ಸ್ಥಳವು ಮೈಸೂರು ಜಿಲ್ಲೆಯಲ್ಲಿ ಕಂಡು ಬರುತ್ತದೆ. 1932 ಮತ್ತು 1927 ವರ್ಷದಲ್ಲಿ ಮಹಾತ್ಮ ಗಾಂಧೀಜಿಯವರು ಭೇಟಿ ನೀಡಿದ್ದರು. ಬದನಾವಲು ಗ್ರಾಮದ ಖಾದಿ ಕೇಂದ್ರವು ಸುಮಾರು 7.5 ಎಕರೆ ಜಾಗದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಬದನಾವಲು ಈ ಸ್ಥಳವು ಖಾದಿ ಚಳವಳಿಯ ದೃಷ್ಟಿಯಿಂದ ಅತ್ಯಂತ ಪ್ರಮುಖವಾಗಿದೆ. ಆರಂಭದಲ್ಲಿ 4 ಮಹಿಳೆಯರೊಂದಿಗೆ ಪ್ರಾರಂಭವಾದ ಈ ಕೇಂದ್ರವು ಮಹಾತ್ಮ ಗಾಂಧೀಜಿಯವರ ಭೇಟಿ ನಂತರ ನೂರು ಜನರು ಕೆಲಸ ಮಾಡುತ್ತಿದ್ದಂತೆ ವಿಸ್ತಾರಗೊಂಡಿತು. ಈ ಯಶಸ್ಸು

ಗಾಂಧೀಜಿಯನ್ನು ಆಶ್ಚರ್ಯಗೊಳಿಸಿತು ಮತ್ತು ಅವರು 1932 ರಲ್ಲಿ ಇಲ್ಲಿ ಬಂದಾಗ ಕೇಂದ್ರದ ಕಾರ್ಯವನ್ನು ಬಹುಮಾನಿಸಿದರು. ಹುದಲಿ 1937ರ ಗಾಂಧೀಜಿ ಬೆಳಗಾವಿಗೆ ಆಗಮಿಸಿ ಅಲ್ಲಿಂದ 25 ಕಿಲೋಮೀಟರ್ ದೂರದಲ್ಲಿರುವ ಹುದಲಿ ಗ್ರಾಮಕ್ಕೆ ದೇಶಪಾಂಡೆ ಅವರ ಕೋರಿಕೆ ಮೇರೆಗೆ ಆಗಮಿಸಿದರು. ಕಾರಣ ಗಾಂಧಿ ಸೇವಾ ಸಂಘದ ವಾರ್ಷಿಕ ಸ್ನೇಹ ಸಮ್ಮೇಳನಕ್ಕೆ ಆಗಮಿಸಿ, ಈ ಒಂದು ವಾರ ತಂಗಿದರು. ಗಾಂಧೀಜಿ ಅವರೊಂದಿಗೆ ಸರದಾರ ವಲ್ಲಭಾಯಿ ಪಟೇಲ್, ಸರೋಜಿನಿ ನಾಯ್ಡು, ರಾಜೇಂದ್ರ ಪ್ರಸಾದ್, ಖಾನ್ ಅಬ್ದುಲ್ ಗಫರ್ ಖಾನ್, ಕಸ್ತೂರಿಬಾ ಗಾಂಧಿ ಮುಂತಾದವರು ಇದ್ದರು. ಇವರನ್ನೆಲ್ಲ ಸುಳಗಾಲ ರೈಲ್ವೆ ನಿಲ್ದಾಣದಿಂದ ಹುದಲಿಯವರೆಗೆ ಎತ್ತಿನ ಗಾಡಿ ಮೂಲಕ ಹೋಗಲು ಏರ್ಪಾಡು ಮಾಡಿದ್ದರು. ಆದರೆ ಗಾಂಧೀಜಿಯವರು ಹುದಲಿಯವರೆಗೆ ಪಾದಯಾತ್ರೆಯನ್ನು ಮಾಡಿದ್ದರು. ಇದಕ್ಕಿಂತ ಮೊದಲು ದೇಶಪಾಂಡೆಯವರು 1927ರಲ್ಲಿ ಹುದ್ದಳಿಯ ಕುಮಾರಿ ಆಶ್ರಮದಲ್ಲಿ ಖಾದಿ ಘಟಕವನ್ನು ಆರಂಭಿಸಿದರು. ಇದೇ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರು 1937 ಜುಲೈ 19ರಂದು ಬೆಳಗಾವಿ ಜಿಲ್ಲೆಯ ಹುದಲಿ ಗ್ರಾಮದಲ್ಲಿ ತಮ್ಮ ಮೊಮ್ಮಗಳಾದ ಮನು ಗಾಂಧಿ ಅವರನ್ನು ಸುರೇಂದ್ರ ಮಶ್ರೂ ವಾಲಾ ಅವರೊಂದಿಗೆ ವಿವಾಹವನ್ನು ಮಾಡಿದರು. ಆಗ ಬ್ರಿಟಿಷ್ ಕಾಲದ ಅಧಿಕಾರಿಗಳು ಅಂತರ್ಜಾತಿ ವಿವಾಹವನ್ನು ನಿಷೇಧಿಸುವ ನಿಯಮವನ್ನು ವಿಧಿಸಿದರು. ಆದರೆ ಗಾಂಧೀಜಿಯವರು ಈ ನಿಯಮವನ್ನು ಉಲ್ಲಂಘಿಸಿ ತಮ್ಮ ಮೊಮ್ಮಗಳನ್ನು ಅಂತರ್ಜಾತಿ ವಿವಾಹ ಮಾಡಿ ಜನರಿಗೆ ತಿಳಿಸಿದರು.

**ಉಪಸಂಹಾರ:**

ಮಹಾತ್ಮ ಗಾಂಧೀಜಿಯವರು ಕರ್ನಾಟಕದಲ್ಲಿ ನಡೆಸಿದ ಸಾಮಾಜಿಕ ಚಟುವಟಿಕೆಗಳು ಅಸ್ಪೃಶ್ಯತೆ ನಿವಾರಣೆ, ಸ್ವದೇಶಿ ಚಿಂತನೆ, ಖಾದಿ ಪ್ರಚಾರ ಮತ್ತು ಹಿಂದುಳಿದ ವರ್ಗಗಳ ಸಬಲೀಕರಣಕ್ಕೆ ದಿಕ್ಕು ನೀಡಿದವು. ಅವರು ಸಮಾಜದಲ್ಲಿ ನೈತಿಕ ಮೌಲ್ಯಗಳು, ಶ್ರಮದ ಗೌರವ ಮತ್ತು ಸಮಾನತೆಯ ಪರಿಕಲ್ಪನೆ ಬಿತ್ತರಿಸಿದರು. ಈ ಸಂಶೋಧನೆಯಿಂದ ಗಾಂಧೀಜಿಯವರ ಪಾತ್ರವು ಕೇವಲ ಸ್ವಾತಂತ್ರ್ಯ ಹೋರಾಟಕ್ಕೆ ಸೀಮಿತವಲ್ಲದೆ, ಸಾಮಾಜಿಕ ಪುನರ್ರಚನೆಯ ಪ್ರಮುಖ ಅಂಶವಾಗಿದೆಯೆಂಬುದು ಸಾಬೀತಾಗುತ್ತದೆ. ಅವರ ಭಾವನೆಗಳು ಹಾಗೂ ಕಾರ್ಯಪದ್ಧತಿಗಳು ಇಂದು ಕೂಡ ನವ ಭಾರತ ನಿರ್ಮಾಣಕ್ಕೆ ಮಾರ್ಗದರ್ಶಿಯಾಗುತ್ತಿವೆ. ಕರ್ನಾಟಕದ ಜನತೆಯ ಜೀವನದಲ್ಲಿ ಗಾಂಧೀಜಿಯ ಧೋರಣೆಯ ಪ್ರಭಾವ ನಿರಂತರವಾಗಿ ಅನುಭವಗೊಳ್ಳುತ್ತಿದೆ.

## ಪರಾಮರ್ಶನ ಗ್ರಂಥಗಳು:


1. ಪ್ರೊ. ಶೇಕ್ ಅಲಿ ಬಿ, ಪ್ರೊ. ಚಂದ್ರಶೇಖರ್ ಎಸ್., (1997), ಕರ್ನಾಟಕ ಚರಿತ್ರೆ ಸಂಪುಟ 7. ಪ್ರಕಾಶಕರು, ಪ್ರೊ ಎ ವಿ ನಾವಡ ನಿರ್ದೇಶಕರು, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
2. ಎಂ ವಿ ಕೃಷ್ಣರಾವ್ ಹಾಗೂ ಹಾಲಪ್ಪ. ಗ ಸ., (1962), ಹಿಸ್ಟರಿ ಆಫ್ ಫ್ರೀಡಂ ಮೂವ್ಮೆಂಟ್ ಇನ್ ಕರ್ನಾಟಕ, ಸಂಪುಟ 1. ಬೆಂಗಳೂರು.
3. ಕಾಮತ್ ಸೂರ್ಯನಾಥ್., (1974,1977,1980) ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು. ಸಂಪುಟ 1,2,3.
4. ಗಾಂಧಿ ಎಂ ಕೆ., (1942), ವಿಮೆನ್ ಅಂಡ್ ಸೋಶಿಯಲ್ ಇಂಜಸ್ಟಿಸ್. ಅಹಮದಾಬಾದ್ ಪು.175
5. ಕರಮರಕರ್ ಡಿ ಪಿ., (1970), ಸ್ವಾತಂತ್ರ್ಯದ ಪ್ರಮುಖ ಆಂದೋಲನಗಳು. ಮೈಸೂರು ಸರ್ಕಾರದ ಪ್ರಕಟಣೆ.
6. ಕರ್ನಾಟಕದ ಪರಂಪರೆ, ಸಂಪುಟ 2, ಬೆಂಗಳೂರು. ಪು.216 530



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.